**ಕುವೈತ್ ಪ್ರಧಾನಿಯನ್ನು ಭೇಟಿ ಮಾಡಿದ ಪ್ರಧಾನ ಮಂತ್ರಿಗಳು**

ಡಿಸೆಂಬರ್ 22, 2024

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಕುವೈತ್ ರಾಷ್ಟ್ರದ ಪ್ರಧಾನ ಮಂತ್ರಿಗಳಾದ ಗೌರವಾನ್ವಿತ ಶೇಖ್ ಅಹಮದ್ ಅಲ್-ಅಬ್ದುಲ್ಲಾ ಅಲ್-ಅಹಮದ್ ಅಲ್-ಸಬಾಹ್ ಅವರೊಂದಿಗೆ ಇಂದು ಮಾತುಕತೆ ನಡೆಸಿದರು.

2.ಇಬ್ಬರು ನಾಯಕರು ರಾಜಕೀಯ, ವ್ಯಾಪಾರ, ಹೂಡಿಕೆ, ಶಕ್ತಿ, ರಕ್ಷಣೆ, ಭದ್ರತೆ, ಆರೋಗ್ಯ, ಶಿಕ್ಷಣ, ತಂತ್ರಜ್ಞಾನ, ಸಾಂಸ್ಕೃತಿಕ ಮತ್ತು ಜನರಿಂದ ಜನರ ನಡುವೆ ಸಂಬಂಧಗಳನ್ನು ಒಳಗೊಂಡಂತೆ ಕ್ಷೇತ್ರಗಳಲ್ಲಿ ಕಾರ್ಯತಂತ್ರದ ಪಾಲುದಾರಿಕೆಯನ್ನು ಬಲಪಡಿಸಲು ಮಾರ್ಗಸೂಚಿಯನ್ನು ಚರ್ಚಿಸಿದರು. ಎರಡು ದೇಶಗಳ ನಡುವಿನ ಆಳವಾದ ಆರ್ಥಿಕ ಸಹಕಾರಕ್ಕೆ ಅವರು ಒತ್ತು ನೀಡಿದರು. ಶಕ್ತಿ, ರಕ್ಷಣೆ, ವೈದ್ಯಕೀಯ ಸಾಧನಗಳು, ಫಾರ್ಮಾ, ಫುಡ್ ಪಾರ್ಕ್‌ಗಳು ಮುಂತಾದ ಕ್ಷೇತ್ರಗಳಲ್ಲಿ ಹೊಸ ಅವಕಾಶಗಳನ್ನು ನೋಡಲು ಕುವೈತ್ ಹೂಡಿಕೆ ಪ್ರಾಧಿಕಾರ ಮತ್ತು ಇತರ ಪಾಲುದಾರರನ್ನು ಒಳಗೊಂಡಿರುವ ಪ್ರತಿನಿಧಿಗಳನ್ನು ಪ್ರಧಾನ ಮಂತ್ರಿಗಳು ಆಹ್ವಾನಿಸಿದರು. ನಾಯಕರು ಸಾಂಪ್ರದಾಯಿಕ ಔಷಧಿ ಮತ್ತು ಕೃಷಿ ಸಂಶೋಧನೆಯಲ್ಲಿ ಸಹಕಾರವನ್ನು ಚರ್ಚಿಸಿದರು. ಸಹಕಾರಕ್ಕಾಗಿ ಜಂಟಿ ಆಯೋಗಕ್ಕೆ (JCC) ಇತ್ತೀಚೆಗೆ ಸಹಿ ಹಾಕಿರುವುದನ್ನು ಅವರು ಸ್ವಾಗತಿಸಿದರು, ಇದರ ಅಡಿಯಲ್ಲಿ ಆರೋಗ್ಯ, ಮಾನವಶಕ್ತಿ ಮತ್ತು ಹೈಡ್ರೋಕಾರ್ಬನ್‌ಗಳ ಮೇಲೆ ಅಸ್ತಿತ್ವದಲ್ಲಿರುವ JWG ಗಳ ಜೊತೆಗೆ ವ್ಯಾಪಾರ, ಹೂಡಿಕೆ, ಶಿಕ್ಷಣ, ತಂತ್ರಜ್ಞಾನ, ಕೃಷಿ, ಭದ್ರತೆ ಮತ್ತು ಸಂಸ್ಕೃತಿಯ ಕ್ಷೇತ್ರಗಳಲ್ಲಿ ಹೊಸ ಜಂಟಿ ಕಾರ್ಯ ಗುಂಪುಗಳನ್ನು ಸ್ಥಾಪಿಸಲಾಗಿದೆ.

3.ಮಾತುಕತೆಯ ನಂತರ ದ್ವಿಪಕ್ಷೀಯ ಒಪ್ಪಂದಗಳು ಮತ್ತು MoU ಗಳಿಗೆ ಸಹಿ ಮತ್ತು ವಿನಿಮಯಕ್ಕೆ ನಾಯಕರು ಸಾಕ್ಷಿಯಾದರು. ಇವುಗಳು ರಕ್ಷಣಾ ಸಹಕಾರ, ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ, ಕ್ರೀಡಾ ಕ್ಷೇತ್ರದಲ್ಲಿ ಸಹಕಾರದ ಕುರಿತು ಕಾರ್ಯಕಾರಿ ಕಾರ್ಯಕ್ರಮ ಮತ್ತು ಕುವೈತ್ ಇಂಟರ್ನ್ಯಾಷನಲ್ ಸೋಲಾರ್ ಅಲಾಯನ್ಸ್‌ಗೆ ಸೇರುವ ಚೌಕಟ್ಟಿನ ಒಪ್ಪಂದವನ್ನು ಒಳಗೊಂಡಿದೆ.

4. ಪ್ರಧಾನ ಮಂತ್ರಿಗಳು ಭಾರತಕ್ಕೆ ಭೇಟಿ ನೀಡುವಂತೆ ಗೌರವಾನ್ವಿತ ಕುವೈತ್ ಪ್ರಧಾನ ಮಂತ್ರಿಗಳನ್ನು ಆಹ್ವಾನಿಸಿದರು.

**ಕುವೈತ್ ಸಿಟಿ**

**ಡಿಸೆಂಬರ್ 22, 2024**